

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಧರ್ಮ ಮಾನವತೆಗೆ ವರವೋ, ಹಿಡಿಶಾಪವೋ?....

ಮಧ್ಯ ಅಮೇರಿಕಾದ ದಕ್ಷಿಣದ ತುದಿಯಲ್ಲಿ ಒಂದು ಪುಟ್ಟ ರಾಷ್ಟ್ರವಿದೆ. ಅದರ ಹೆಸರು ಕೋಸ್ಟರೀಕಾ (Costa Rica). ಕರೇಬಿಯನ್ ಸಮುದ್ರವನ್ನು ಫೆಸಿಫಿಕ್ ಮಹಾಸಾಗರದಿಂದ ಕೇವಲ 75 ಮೈಲುಗಳ ಅಂತರದಲ್ಲಿ ಬೇರ್ಪಡಿಸಿರುವ ಈ ದೇಶದ ಒಟ್ಟು ವಿಸ್ತೀರ್ಣ ಕೇವಲ 20 ಸಾವಿರ ಚದರಮೈಲಿ; ಜನಸಂಖ್ಯೆ ಸುಮಾರು 29 ಲಕ್ಷ. ಜಗತ್ತಿನಲ್ಲಿ ದೇಶದ ಸಂರಕ್ಷಣೆಗೆಂದು ಸೈನ್ಯವನ್ನಿಟ್ಟುಕೊಳ್ಳದ ಏಕೈಕ ರಾಷ್ಟ್ರವೆಂದರೆ ಕೋಸ್ಟರೀಕಾ. ಈ ದೇಶ ತನ್ನ ಸಂವಿಧಾನದಲ್ಲಿಯೇ ಸೈನ್ಯದ ಬಳಕೆಯನ್ನು ನಿಷೇಧಗೊಳಿಸಿದೆ. ಕಾನೂನು ಪರಿಪಾಲನೆಗೆಂದು ಮಾತ್ರ ಪೋಲೀಸನ್ನು ಇಟ್ಟುಕೊಂಡಿದೆ. ಇದರ ರಾಜಧಾನಿ 'ಸ್ಯಾನ್ ಓಜೆ' (San Jose). ಇಲ್ಲಿ ವಿಶ್ವರಾಷ್ಟ್ರ ಸಂಸ್ಥೆಯು 1980 ರಲ್ಲಿ ಸ್ಥಾಪಿಸಿರುವ 'ಶಾಂತಿ ವಿಶ್ವವಿದ್ಯಾನಿಲಯ' (University for Peace) ಎಂಬ ಸಂಸ್ಥೆ ಇದೆ. ಈ ವಿಶ್ವವಿದ್ಯಾನಿಲಯದ ಪ್ರಾಂಗಣದೊಳಗೆ ಕಾಲಿಡುತ್ತಿದ್ದಂತೆಯೇ ಕಾಣಸಿಗುವುದು ಶಾಂತಿ ಮತ್ತು ಅಹಿಂಸೆಯ ಪ್ರತಿರೂಪವಾದ ಮಹಾತ್ಮಾ ಗಾಂಧೀಜೀಯ ಕಂಚಿನ ಪುತ್ಥಳಿ. ಹಿಂಬದಿಯಲ್ಲಿ ರಾರಾಜಿಸುತ್ತಿರುವ ಪ್ರಪಂಚದ ಎಲ್ಲ ಪ್ರಮುಖ ದೇಶಗಳ ರಾಷ್ಟ್ರಧ್ವಜಗಳು. ಪುತ್ಥಳಿಯ ಕೆಳಗೆ 'ವಿವಿಧತೆಯಲ್ಲಿ ಏಕತೆ' ಎಂಬ ಸಂದೇಶವನ್ನು 'Unity in Diversity', 'Vividhata me Ekata', 'Unidad en la Diversidad' ಎಂದು ಇಂಗ್ಲೀಷ್, ಹಿಂದೀ ಮತ್ತು ಸ್ಪ್ಯಾನಿಷ್ ಭಾಷೆಗಳಲ್ಲಿ ಬರೆಯಲಾಗಿದೆ. ಬಹಳ ವರ್ಷಗಳ ಹಿಂದೆ (1991) ಈ ವಿಶ್ವವಿದ್ಯಾನಿಲಯದಲ್ಲಿ ನಡೆದ ಅಂತಾರಾಷ್ಟ್ರೀಯ ಸಮ್ಮೇಳನಕ್ಕೆ ನಮ್ಮನ್ನು ಆಹ್ವಾನಿಸಲಾಗಿತ್ತು. ಸಮ್ಮೇಳನದ ಆರಂಭದಲ್ಲಿ "Hindu Visions of Global Peace" ಎಂಬ ವಿಷಯ ಕುರಿತು ನಮ್ಮ ಭಾಷಣ. ಈ ಸಮ್ಮೇಳನಕ್ಕೆ ಅನೇಕ ದೇಶಗಳಿಂದ ಗಣ್ಯಮಾನ್ಯ ವ್ಯಕ್ತಿಗಳು ಬಂದಿದ್ದರು. ಅವರಲ್ಲಿ ಇಸ್ರೇಲ್ ದೇಶದಿಂದ ಬಂದಿದ್ದ ಒಬ್ಬ ಯೆಹೂದಿಗಳ ರಾಬಿ (ಪಾದ್ರಿ) ಇದ್ದರು. ಅವರು ತಮ್ಮ ದೇಶದಿಂದ ಹೊರಡುವಾಗ ನಡೆದ ಒಂದು ರೋಚಕವಾದ ಘಟನೆಯನ್ನು ವಿವರಿಸಿದರು. ಅವರು ಇಸ್ರೇಲ್‌ನಿಂದ ಹೊರಡುವ ಮುನ್ನ ಅವರಿಗೆ ಆತ್ಮೀಯರಾದ ಹಿರಿಯರೊಬ್ಬರನ್ನು ಕಂಡು ಕೋಸ್ಟರೀಕಾ ದೇಶಕ್ಕೆ ಹೋಗುತ್ತಿರುವ ಸಂಗತಿಯನ್ನು ತಿಳಿಸಿ ಸಮ್ಮೇಳನದ ವಿಷಯ "Religions Responding to Global Threats!" (ಜಗತ್ತಿನ ಭಯಭೀತಿಗಳಿಗೆ ಧರ್ಮಗಳ ಸ್ಪಂದನ) ಎಂದು ಹೇಳಿದರಂತೆ. ಸರಿಯಾಗಿ ಕಿವಿ ಕೇಳಿಸದ ಆ ಹಿರಿಯ ವಯಸ್ಸಿನ ವ್ಯಕ್ತಿ ಅದನ್ನು ತಪ್ಪಾಗಿ ಗ್ರಹಿಸಿ "Yes, Yes. Religions are the global threats!" (ಹೌದು, ಹೌದು. ಈ ಜಗತ್ತಿನ ಎಲ್ಲ ಭಯಭೀತಿಗಳಿಗೆ ಧರ್ಮಗಳೇ ಕಾರಣ) ಎಂದು ಪ್ರತಿಕ್ರಿಯಿಸಿದರಂತೆ! ಎಷ್ಟೇ ತಪ್ಪಾಗಿ ಗ್ರಹಿಸಿದ್ದರೂ ಆ ವೃದ್ಧನ ಮಾತು ಎಷ್ಟೊಂದು ವಾಸ್ತವಿಕತೆಯಿಂದ ಕೂಡಿದೆಯೆಂದು ನಿಮಗೆ ಅನ್ನಿಸುತ್ತದೆಯಲ್ಲವೇ! ನಿತ್ಯವೂ ಜಗತ್ತಿನಾದ್ಯಂತ ಭಯೋತ್ಪಾದಕರು ನಡೆಸುತ್ತಿರುವ ಬಾಂಬ್ ಆಸ್ಫೋಟ, ವಿಮಾನ ಅಪಹರಣ ಇತ್ಯಾದಿ ದುಷ್ಕೃತ್ಯಗಳಲ್ಲಿ ಅದೆಷ್ಟೋ ಅಮಾಯಕರು ಬಲಿಯಾಗುತ್ತಿದ್ದಾರೆ. ಜನಜೀವನ ತುಂಬಾ ಆತಂಕಕಾರಿಯಾಗಿದೆ.

ಸಮೂಹ ಮಾಧ್ಯಮಗಳಲ್ಲಿ ಒಳ್ಳೆಯ ಹೆಸರು ಮಾಡಿರುವ ಬಿಬಿಸಿ ದೂರದರ್ಶನವು ಕೆಲವು ವರ್ಷಗಳ ಹಿಂದೆ (2002) ಒಂದು ವಿಶಿಷ್ಟ ಕಾರ್ಯಕ್ರಮವನ್ನು ನಡೆಸಿಕೊಟ್ಟಿತು. "Talking Point" ಎಂಬ ಅದರ ನೇರ ಪ್ರಸಾರ ಕಾರ್ಯಕ್ರಮದಲ್ಲಿ ಪ್ರಪಂಚಾದ್ಯಂತ ಆಸಕ್ತರು ದೂರವಾಣಿಯ ಮೂಲಕ ಚರ್ಚೆ ನಡೆಸುವ ದೂರವಾಣಿ-ಒಳಕರೆ (ಫೋನ್-ಇನ್) ವ್ಯವಸ್ಥೆ ಮಾಡಿತ್ತು. ಚರ್ಚೆಯ ವಿಷಯ: "Is religion still relevant in the modern world?" (ಆಧುನಿಕ ಪ್ರಪಂಚದಲ್ಲಿ ಧರ್ಮವು ಇನ್ನೂ ಪ್ರಸ್ತುತವೇ?). ಇದರಲ್ಲಿ ಭಾಗವಹಿಸಿದವರ ಅಭಿಪ್ರಾಯಗಳನ್ನು ಬಿಬಿಸಿ ಕ್ರೋಢೀಕರಿಸಿ ಪ್ರಕಟಿಸಿದೆ. ಅವುಗಳಲ್ಲಿ ಕೆಲವನ್ನು ಆಯ್ದು ಸಂಕ್ಷಿಪ್ತಗೊಳಿಸಿ 1. ನಕಾರಾತ್ಮಕ ಪ್ರತಿಕ್ರಿಯೆ, 2. ಸಕಾರಾತ್ಮಕ ಪ್ರತಿಕ್ರಿಯೆ ಮತ್ತು 3. ಮಿಶ್ರಪ್ರತಿಕ್ರಿಯೆ ಎಂದು ಮೂರು ಭಾಗಗಳಾಗಿ ವಿಂಗಡಿಸಿ ಕೆಳಗೆ ಕೊಟ್ಟಿದೆ.

**1. ನಕಾರಾತ್ಮಕ ಪ್ರತಿಕ್ರಿಯೆ:**

- ಜಗತ್ತಿನ ಎಲ್ಲ ಸಮಸ್ಯೆಗಳಿಗೆ ಧರ್ಮಗಳೇ ಕಾರಣ. ಧರ್ಮ ಬಡವರಿಗೆ ಮತ್ತು ಅಜ್ಞಾನಿಗಳಿಗೆ ಹೊರತು ಬುದ್ಧಿವಂತರಿಗೆ ಅಲ್ಲ.
- ಜಗತ್ತಿನಲ್ಲಿ ಸಾವಿರಾರು ಧರ್ಮಗಳಿದ್ದು ಪ್ರತಿಯೊಂದು ಧರ್ಮವೂ ತಾನು ಬೋಧಿಸುವುದೇ ಸರಿ ಎಂದು ಪ್ರತಿಪಾದಿಸುತ್ತಿರುವುದರಿಂದ ಯಾವ ಧರ್ಮವೂ ನಿಜವಲ್ಲ.
- ಧರ್ಮ ಮೂಲತಃ ಶೋಷಣೆಯ ಸಾಧನ. ಬಡವರಿಗೆ ಸತ್ತಮೇಲೆ ಸ್ವರ್ಗಸುಖ ಸಿಗುತ್ತದೆಯೆಂದು ನಂಬಿಸಿ ಸಾಮ್ರಾಟರು ಮತ್ತು ಪುರೋಹಿತರು ಒಂದಾಗಿ ಸಂಚುಮಾಡಿ ತಮ್ಮ ವೈಭವೋಪೇತ ಜೀವನ ನಡೆಸಲು ಅನುಕೂಲವಾಗುವಂತೆ ಮಾಡಿಕೊಂಡಿರುವ ತಂತ್ರಗಾರಿಕೆ.
- ಧರ್ಮ ಒಂದು ಬೊಗಳೆ. ಇದನ್ನು ಬೇಗ ತೊಲಗಿಸಿದಷ್ಟೂ ಒಳ್ಳೆಯದು.
- ಧರ್ಮ = ಯುದ್ಧ.
- ಜಗತ್ತಿನಲ್ಲಿ ನಡೆಯುತ್ತಾ ಬಂದಿರುವ ಎಲ್ಲ ಸಂಘರ್ಷ ಮತ್ತು ದ್ವೇಷಗಳಿಗೆ ಧರ್ಮವೇ ಮೂಲ ಕಾರಣ.
- ಧರ್ಮ ಜನರನ್ನು ವಿಘಟಿಸುತ್ತದೆ. ಜನರಲ್ಲಿ ದ್ವೇಷ, ಅಸೂಯೆ, ಮಾತ್ಸರ್ಯಗಳನ್ನು ಉಂಟುಮಾಡಿ ಸಂಕಷ್ಟಕ್ಕೆ ಸಿಲುಕಿಸಿದೆ. ಇದನ್ನು ಬಿಟ್ಟು ಜನರು ತಮ್ಮ ದೇಶದ ಸಂವಿಧಾನದಲ್ಲಿರುವ ನಿಯಮಗಳನ್ನು ಪಾಲಿಸಿದರೆ ಸಾಕು ಎಲ್ಲರೂ ಸುಖವಾಗಿರಬಹುದು.
- ಆಧುನಿಕ ಪ್ರಪಂಚದಲ್ಲಿ ಧರ್ಮ ಸಂಪೂರ್ಣ ಅಪ್ರಸ್ತುತ. ಸೂರ್ಯನ ಸುತ್ತ ಭೂಮಿ ತಿರುಗುತ್ತಿದೆಯೇ ಹೊರತು ಭೂಮಿಯ ಸುತ್ತ ಸೂರ್ಯ ತಿರುಗುತ್ತಿಲ್ಲ ಎಂದು ಪ್ರತಿಪಾದಿಸಿದ ವಿಜ್ಞಾನಿಗಳ ಕಗ್ಗೊಲೆಯಾಗಿದ್ದು ಈ ಧರ್ಮಸಂಸ್ಥೆಗಳಿಂದ.
- ಧರ್ಮಸಂಸ್ಥೆಗಳು ದೇವರು ಮತ್ತು ಭಕ್ತರ ಮಧ್ಯೆ ದೊಡ್ಡ ಅಡ್ಡಗೋಡೆಗಳಾಗಿವೆ.
- ಧರ್ಮ ಕಾಲಹರಣ ಮತ್ತು ಭಯೋತ್ಪಾದನೆಗೆ ಎಡೆಮಾಡಿಕೊಟ್ಟಿದೆ.

**2. ಸಕಾರಾತ್ಮಕ ಪ್ರತಿಕ್ರಿಯೆ:**

- ಧರ್ಮ ಏನೆಂದು ಸರಿಯಾಗಿ ತಿಳಿದುಕೊಳ್ಳದೆ ಬಾಯಿಗೆ ಬಂದಂತೆ ಹರಟುವುದು ಸರಿಯಲ್ಲ.
- ಧರ್ಮವು ಆಧುನಿಕ ಪ್ರಪಂಚದಲ್ಲಿ ನಿಜಕ್ಕೂ ಪ್ರಸ್ತುತ. ಜನರಿಗೆ ಬದುಕಲು ಇರುವ ಆಶಾಕಿರಣ.
- ಜಗತ್ತಿನ ಎಲ್ಲ ಸಮಸ್ಯೆಗಳಿಗೆ ಧರ್ಮವೇ ಮೂಲಕಾರಣ ಎಂದು ಆಪಾದಿಸುವವರು, ಎಲ್ಲ ದೇಶಗಳ ಕಾನೂನಿಗೆ ಧರ್ಮವೇ ತಳಹದಿ ಎಂಬುದನ್ನು ಮನಗಾಣಬೇಕು.
- ಬದುಕಿಗೆ ಒಂದು ಅರ್ಥವನ್ನು ತಂದುಕೊಡುವುದೇ ಧರ್ಮ. ಧರ್ಮವಿಲ್ಲದ ಜೀವನ ಬರಡು.
- ಧರ್ಮವಿಲ್ಲದೇ ಹೋದರೆ ಮನುಷ್ಯರಲ್ಲಿರುವ ದ್ವೇಷ, ಅಸೂಯೆ, ಮಾತ್ಸರ್ಯ ಕೊನೆಗೊಳ್ಳುತ್ತವೆ ಎಂಬುದು ಹುಸಿ. ಅವು ಮತ್ತಷ್ಟೂ ಜಾಸ್ತಿಯಾಗುತ್ತವೆ.
- ಜಗತ್ತಿನಲ್ಲಿ ಉಂಟಾಗಿರುವ ಎಲ್ಲ ಸಾವುನೋವುಗಳಿಗೂ ಮತೀಯ ದುರ್ಭಾವನೆಗಳು ಕಾರಣವೇ ಹೊರತು ಧರ್ಮಗಳು ಕಾರಣವಲ್ಲ.
- ಜೀವವಿಲ್ಲದ ಶರೀರ ಶವ. ಹಾಗೇನೇ ಧರ್ಮವಿಲ್ಲದ ಮನುಷ್ಯ.
- ಆಶ್ಚರ್ಯದ ಸಂಗತಿಯೆಂದರೆ ಎಲ್ಲಾ ಚೆನ್ನಾಗಿದ್ದಾಗ ದೇವರು ಬೇಕಿಲ್ಲ. ಸಂಕಟಬಂದಾಗ ವೆಂಕಟರಮಣ.
- ಕ್ರೈಸ್ತ, ಇಸ್ಲಾಂ, ಹಿಂದೂ ಮತ್ತಿತರ ದೊಡ್ಡ ಧರ್ಮಗಳ ಮೂಲ ತತ್ವಗಳು ಜಗತ್ತಿನ ಜನರಿಗೆ ನೆಮ್ಮದಿಯಿಂದ ಬದುಕಲು ಬೇಕಾಗಿರುವ ಆದರ್ಶಗಳು.
- ಇಂದು ನಡೆಯುತ್ತಿರುವ ಕೊಲೆ, ಭಯೋತ್ಪಾದನೆಗಳಿಗೆ ನಿಜವಾದ ಧರ್ಮ ಕಾರಣವಲ್ಲ.
- ಮಾನವತೆ ಎಂಬ ಹಕ್ಕಿಗೆ ಎರಡು ರೆಕ್ಕೆಗಳು: ಒಂದು ಧರ್ಮ ಇನ್ನೊಂದು ವಿಜ್ಞಾನ. ಯಾವುದೇ ಹಕ್ಕಿಯು ಒಂದು ರೆಕ್ಕೆಯಿಂದ ಹಾರಲು ಸಾಧ್ಯವೇ?

**3. ಮಿಶ್ರಪ್ರತಿಕ್ರಿಯೆ:**

- ಮತಾಂಧರನ್ನು ಯಶಸ್ವಿಯಾಗದಂತೆ ಎದುರಿಸಬಲ್ಲ ನಿಷ್ಠಾವಂತ ಧರ್ಮಿಷ್ಠರು ಜಗತ್ತಿನಲ್ಲಿಲ್ಲ.

- ಬೃಹತ್ ಬ್ರಹ್ಮಾಂಡದಲ್ಲಿ ಸಣ್ಣ ಕಲ್ಲುಬಂಡೆಯಂತಿರುವ ಈ ಭೂಮಿಯ ಮೇಲೆ ಹರಿದಾಡುತ್ತಿರುವ ಆರು ಬಿಲಿಯನ್ ಜಂತುಗಳು ಪರಸ್ಪರ ಕಚ್ಚಾಡಿ ಸಾಯುತ್ತಿವೆ.
- ಚಿಕ್ಕ ಮಕ್ಕಳ ಕೈಯಲ್ಲಿ ಬೊಂಬೆಗಳಿದ್ದಂತೆ ದೊಡ್ಡವರ ಕೈಯಲ್ಲಿ ಈ ದೇವರು ಮತ್ತು ಧರ್ಮಗಳು.
- ಧರ್ಮ ಮತ್ತು ರಾಜಕೀಯಗಳ ಸಂಮಿಶ್ರಣ ಮನುಕುಲಕ್ಕೆ ಮಾರಕ. ರಾಜಕೀಯದಿಂದ ಧರ್ಮವನ್ನು ದೂರವಿಡಬೇಕು.
- ಪರಸ್ಪರರ ಮಧ್ಯೆ ನಂಬಿಕೆ ಮತ್ತು ಗೌರವ ಇಂದಿನ ತುರ್ತು ಅಗತ್ಯ.

ಮೇಲಿನ ಮೂರು ತೆರನಾದ ಅಭಿಪ್ರಾಯಗಳನ್ನು ಓದಿದಾಗ ಕಂಡುಬರುವುದೇನೆಂದರೆ: ನಕಾರಾತ್ಮಕ ಪ್ರತಿಕ್ರಿಯೆ ವ್ಯಕ್ತಪಡಿಸಿದವರು ಪ್ರಚಲಿತ ವಿದ್ಯಮಾನಗಳಿಂದ ಬೇಸತ್ತು ಇದಕ್ಕೆಲ್ಲ ಧರ್ಮ ಮೂಲಕಾರಣವೆಂದು ತಪ್ಪಾಗಿ ಗ್ರಹಿಸಿ ದುಡುಕಿನಿಂದ ಆಡಿದ ಆಕ್ರೋಶದ ಹಾಗೂ ಪ್ರಚೋದನಾಕಾರಿ ಮಾತುಗಳು. ಧರ್ಮತತ್ವಗಳ ಆಳವಾದ ಅರಿವಿಲ್ಲದೆಯೇ ಮನುಕುಲದ ನೋವನ್ನು ಕಂಡು ಕೆರಳಿ ಆಡಿದ ಅಪಲಾಪಗಳು. ಭಯೋತ್ಪಾದಕರ ಮನೋಧರ್ಮಕ್ಕೆ ಹತ್ತಿರವಾದ ಮನೋಭೂಮಿಕೆಯುಳ್ಳವರೆಂದರೂ ಆಶ್ಚರ್ಯಪಡಬೇಕಾಗಿಲ್ಲ. ಸಕಾರಾತ್ಮಕ ಪ್ರತಿಕ್ರಿಯೆ ವ್ಯಕ್ತಪಡಿಸಿದವರು ಸಾತ್ವಿಕಸ್ವಭಾವದವರೂ, ಧರ್ಮಭೀರುಗಳು ಮತ್ತು ಜೀವನದಲ್ಲಿ ಉನ್ನತ ಆದರ್ಶಗಳನ್ನು ಇಟ್ಟುಕೊಂಡಿರುವವರು. ಮಿಶ್ರ ಪ್ರತಿಕ್ರಿಯೆ ವ್ಯಕ್ತಪಡಿಸಿದವರು ಧರ್ಮದಲ್ಲಿ ನಂಬಿಕೆ ಇಲ್ಲದವರು ಆದರೆ ಧರ್ಮದ ಬಗ್ಗೆ ಸಹಾನುಭೂತಿಯುಳ್ಳವರು.

ವಿಶ್ವದ ಜನತೆಯ ಈ ವಿಭಿನ್ನ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ನಿಮಗೆ ಏನನ್ನಿಸುತ್ತದೆ? **ಧರ್ಮವು ಮಾನವತೆಗೆ ವರವೋ ಅಥವಾ ಹಿಡಿಶಾಪವೋ?** (Is Religion a Blessing or Curse to Mankind?) ನಮ್ಮ ಉತ್ತರದಿಂದ ಪ್ರಭಾವಿತರಾಗುವ ಮುನ್ನ ನೀವು ಕ್ಷಣಕಾಲ ಸ್ವತಂತ್ರವಾಗಿ ಆಲೋಚಿಸಿ ನಂತರ ಮುಂದಿನ ಸಾಲುಗಳನ್ನು ಓದಿ. ಇದೇ ವಿಷಯ ಕುರಿತು ಎರಡು ವರ್ಷಗಳ ಹಿಂದೆ (2006) ಜರ್ಮನಿಯ 'ಅಮರಾಂಗ್' ಎಂಬ ನಗರದಲ್ಲಿ ನಡೆದ ಒಂದು ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಮಾತನಾಡಲು ನಮ್ಮನ್ನು ಆಹ್ವಾನಿಸಲಾಗಿತ್ತು. 'This is a wrong question' ಎಂದೇ ನಮ್ಮ ವಾದವನ್ನು ಮಂಡಿಸಿದೆವು. ವಿಷಯವೇನೋ ತುಂಬಾ ಕುತೂಹಲಕಾರಿಯಾಗಿದೆ. ಆದರೆ ಇಲ್ಲಿ ಕೇಳಿರುವ ಪ್ರಶ್ನೆಯೇ ತಪ್ಪು. ಇದೇ ಪ್ರಶ್ನೆಯನ್ನು ವಿಜ್ಞಾನವನ್ನು ಕುರಿತು "ವಿಜ್ಞಾನ ಮಾನವತೆಗೆ ವರವೋ, ಹಿಡಿಶಾಪವೋ?" ಎಂದು ಕೇಳಿದರೆ ಉತ್ತರಿಸಲು ನಮಗೆ ಯಾವ ಹಿಂಜರಿಕೆಯೂ ಇಲ್ಲ. ವಿಜ್ಞಾನಿಗಳು ಮತ್ತು ಸಮಾಜಶಾಸ್ತ್ರಜ್ಞರು ಪರ ಮತ್ತು ವಿರುದ್ಧವಾಗಿ ದೊಡ್ಡ ಸಂವಾದವನ್ನೇ ಮಾಡಬಹುದು. ಆದರೆ ಧರ್ಮದ ಬಗ್ಗೆ ಈ ಪ್ರಶ್ನೆ ಅಸಂಗತ. ಏಕೆಂದರೆ ಇಲ್ಲಿ ಬಳಸಿರುವ ಎರಡು ಮುಖ್ಯ ಶಬ್ದಗಳನ್ನು ಗಮನಿಸಿ - ಒಂದು 'ವರ' ಇನ್ನೊಂದು 'ಶಾಪ'. ಇವೆರಡೂ ಶಬ್ದಗಳು ಮತ್ತು ಅವುಗಳ ಪರಿಕಲ್ಪನೆಗಳು (concepts) ಧರ್ಮದ ನೆಲೆಯಿಂದ ಬಂದವು. 'ಪ್ರೋಟಾನ್' ಮತ್ತು 'ನ್ಯೂಟ್ರಾನ್' ಶಬ್ದಗಳಂತೆ ವಿಜ್ಞಾನದಿಂದ ಬಂದವುಗಳಲ್ಲ. ಯಾವ ಪರಿಕಲ್ಪನೆಗಳು ಧರ್ಮದ ನೆಲೆಗಟ್ಟಿನಿಂದ ಬಂದಿವೆಯೋ ಅವುಗಳನ್ನೇ ಮಾನದಂಡವಾಗಿಟ್ಟುಕೊಂಡು ಅವುಗಳಿಗೆ ಜನ್ಮ ನೀಡಿದ ಧರ್ಮವನ್ನೇ ಅಳೆಯಹೊರಡುವುದು ಧಾರ್ಷ್ಟ್ಯದ ಮಾತಾಗುತ್ತದೆ. ಭಸ್ಮಾಸುರನ ಕಥೆ ನಿಮಗೆ ನೆನಪಿದೆಯಲ್ಲವೇ? ಭಸ್ಮಾಸುರ ನಾನು ಯಾರ ತಲೆಯ ಮೇಲೆ ಕೈಯಿಡುತ್ತೇನೋ ಅವರು ಸುಟ್ಟು ಬೂದಿಯಾಗಬೇಕೆಂದು ಶಿವನನ್ನು ಬೇಡಿದ. ಬೋಳೆ ಶಿವ ಹಿಂದೆ ಮುಂದೆ ಯೋಚಿಸದೆ 'ತಥಾಽಸ್ತು' ಎಂದ. ನೀನು ಕೊಟ್ಟ ವರ ನಿಜವಾಗಿಯೂ ಫಲಕಾರಿಯಾಗುತ್ತದೆ ಎಂದು ನಾನು ನಂಬುವುದು ಹೇಗೆಂದು ಪರೀಕ್ಷಿಸಲು ಭಸ್ಮಾಸುರ ಶಿವನ ತಲೆಯ ಮೇಲೆಯೇ ಕೈಯಿಡಲು ಮುಂದಾದ. ಹೀಗೆ ವರ ಕೊಟ್ಟ ಶಿವನ ತಲೆಯ ಮೇಲೆಯೇ ಕೈಯಿಡಲು ಹೊರಟ ಭಸ್ಮಾಸುರನಂತೆ 'ವರ' ಮತ್ತು 'ಶಾಪ'ಗಳ ಪರಿಕಲ್ಪನೆಗಳನ್ನು ಮೂಡಿಸಿದ 'ಧರ್ಮ'ದ ತಲೆಯ ಮೇಲೆಯೇ ಕೈಯಿಡಲು ಹೊರಟಂತಾಗಿದೆ. ಆಗ ಶಿವ ಕಾಲ್ಕಿತ್ತಂತೆ, ಧರ್ಮವೂ ಕಾಲ್ಕಿತ್ತು ಅವಾಂತರಗಳಿಗೆ ಎಡೆಮಾಡಿಕೊಟ್ಟಿದೆ. ಕಳೆದ ವಾರ ಪ್ರಸ್ತಾಪಿಸಿದ ನಮ್ಮ ಲಿಂಗೈಕ್ಯ ಗುರುವರ್ಯರ ಡೈರಿಯಲ್ಲಿ (1938) ಈ ಮುಂದಿನ ಮಾತುಗಳು ಇವೆ: "ನಮ್ಮ ದೇವರು ನಿಮ್ಮ ದೇವರೆಂಬುವವರು ಈಶ್ವರ ದ್ರೋಹಿಗಳು, ಈಶ್ವರನೊಬ್ಬನೇ. ಮಸೀತಿಯಲ್ಲಿರುವ ದೇವರೇ ಮಂದಿರದಲ್ಲಿದ್ದಾನೆ. ಮಂದಿರದಲ್ಲಿರುವವನೇ ಚರ್ಚಿನಲ್ಲಿದ್ದಾನೆ." ಈ ದೃಷ್ಟಿಯಿಂದ ನೋಡಿದರೆ ಮತಾಂತರಗೊಳಿಸುವ ಯತ್ನ ಮತಾಂಧತೆಯಲ್ಲದೆ ಬೇರೆಯಲ್ಲ. ಗಾಂಧೀಜಿಯನ್ನೂ ಮತಾಂತರಗೊಳಿಸುವ ವಿಫಲಪ್ರಯತ್ನ ನಡೆದಿತ್ತೆಂದು ಎಲ್ಲಿಯೋ ಓದಿದ್ದೇವೆ. ಈಗ ಕರ್ನಾಟಕದಲ್ಲಿ ಚರ್ಚುಗಳ ಮೇಲೆ ನಡೆದಿರುವ ಧಾಳಿ ಧರ್ಮ ಧರ್ಮಗಳ ತಾತ್ವಿಕ ಸಂಘರ್ಷವಲ್ಲ, ಪಕ್ಕದ ಮನೆಯ ಹುಡುಗ ಮನೆಯ ಮಗಳನ್ನು ಓಡಿಸಿಕೊಂಡು ಹೋದಾಗ ಸಿಟ್ಟಿನಿಂದ ಉಂಟಾಗಬಹುದಾದ ಸಾಮಾಜಿಕ ಸಂಘರ್ಷ! ಈ ಘಟನಾವಳಿಗಳ ಹಿಂದೆ ರಾಜಕೀಯ ಹಿತಾಸಕ್ತಿಗಳ ಕೈವಾಡ

ಇಲ್ಲದಿಲ್ಲ. ಮತಾಂತರದ ಹಿಂದೆ ಮತಾಂಧತೆಯಲ್ಲದೆ ಮತಾಂತರಗೊಳ್ಳುವ ವ್ಯಕ್ತಿಯಲ್ಲಿ ಸ್ವಧರ್ಮದ ಬಗ್ಗೆ ಇರುವ ಅಜ್ಞಾನ, ಸ್ವಧರ್ಮೀಯರು ತೋರುವ ಅವಜ್ಞೆ ಸಹ ಇವೆ. ದೇವರು ಸರ್ವಾಂತರ್ಯಾಮಿ ಎಂದು ಎಲ್ಲ ಧರ್ಮಗಳೂ ಬೋಧಿಸುತ್ತಿರುವಾಗ ಗುಡಿಯನ್ನಾಗಲೀ, ಮಸೀದಿಯನ್ನಾಗಲೀ, ಚರ್ಚನ್ನಾಗಲೀ ಕೆಡವಲು ಮುಂದಾಗುವುದು ತಾನು ನಂಬಿರುವ ದೇವರ ತಲೆಯ ಮೇಲೆ ತಾನೇ ಹೊಡೆದಂತಾಗುತ್ತದೆಯೆಂಬ ಪಾಪಪ್ರಜ್ಞೆ ಎಲ್ಲರನ್ನೂ ಕಾಡಿಸಬೇಕು. ಎಂದಿಗಿಂತ ಇಂದು 'ಪರಧರ್ಮಸಹಿಷ್ಣುತೆ' (tolerance) ಎಲ್ಲ ಮತೀಯರಿಗೂ ತಾರಕಮಂತ್ರವಾಗಬೇಕಾಗಿದೆ.

1.10.2008

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑